ಶ್ರೀ ಪಂಪಾಪತಿ.—ಅಧಿಕಾರಿಗಳಿಗೆ ತಕ್ಷಣ ಕ್ರಮ ಕೈಗೊಳ್ಳುವುದಕ್ಕೆ ಹೇಳಬೇಕು. ಅವರಿಗೆ ಬೇಕಾದಂತಹ ಹೆಂಚು, ಮರಮುಟ್ಟು, ಹಣ ಸಹಾಯ ಮಾಡಿದರೆ, ಅವರು ಮನೆ ಕಟ್ಟಿಕೊಳ್ಳುತ್ತಾರೆ. ಅವರೆಲ್ಲರೂ ಬೀದಿಪಾಲಾಗಿದ್ದಾರೆ. ಕೂಡಲೇ ಸಂಬಂಧಪಟ್ಟ ಅಧಿಕಾರಿಗಳಿಗೆ ತಿಳಿಸಿದರೆ ಅವರು ಕ್ರಮ ಕೈಗೊಳ್ಳುತ್ತಾರೆ.

ಶ್ರೀ ವಿ. ಎಲ್. ಪಾಟೀಲ್.—ಕೂಡಲೇ ವರದಿಯನ್ನು ತರಿಸಿ ಪರಿಶೀಲನೆ ಮಾಡುತ್ತೇವೆ.

(v) ಕಾಚರಕನಹಳ್ಳಿಯಲ್ಲಿ ಮನೆಗಳನ್ನು ಬಿ.ಡಿ.ಎ.ರವರು ಒಡೆದ ಬಗ್ಗೆ ನಿಲುವಳಿ ಸೂಚನೆಗೆ ಅವಕಾಶ ಕೋರಿ ಮನವಿ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಪತಿಯವರೇ, ನಾನು ಮತ್ತು ಸುಮಾರು ಅನೇಕ ಜನ ಮಾನ್ಯ ಸದಸ್ಯರು ಒಂದು ನಿಲುವಳಿ ಸೂಚನೆ ಕಳಿಸಿದ್ದೇವೆ.

ಅಧ್ಯಕ್ಷರು... ತಾವು ಕೂಡ ಕಳಿಸಿದ್ದೀರಿ.

ಶ್ರೀ ಎಸ್. ಬಂಗಾರಪ್ಪ.—ತಮ್ಮಿಂದ ಉತ್ತರ ಬಂದಿದೆ.

ಅಧ್ಯಕ್ಷರು.—ಮೂರು ದಿವಸ ಮುಂಚೆಯೇ ಕಳಿಸಿದ್ದೀರ ತಮಗೆ ಗೊತ್ತಿದೆ, ನೀವು ಸದನದಲ್ಲಿ ಹಳೆಯ ಮತ್ತು ಹಿರಿಯ ಸದಸ್ಯರು ಸಾಧಾರಣವಾಗಿ ೧೦—೧೦½ ಗಂಟೆಗೆ ಮುಂಚಿತವಾಗಿ ಕಳಿಸಬೇಕು. ಮೂರು ದಿವಸ ಮುಂಚಿತವಾಗಿ ಕಳಿಸಿದ್ದರಿಂದ ಅದನ್ನು ಪರಿವರ್ತನೆ ಮಾಡಿ ೭೩ನೇ ನಿಯಮದ ಕೆಳಗೆ ತೆಗೆದುಕೊಳ್ಳುವುದು ಈ ಬಗ್ಗೆ ಸಾಧ್ಯವೇ ಎಂಬುದನ್ನು ಪರಿಶೀಲಿಸುತ್ತೇನೆ. ತಾವು ಒಪ್ಪಿಕೊಳ್ಳುವುದಾದರೆ ನಾಳೆ ಹಾಕಂತ್ತೇನೆ.

ಶ್ರೀ ಎಸ್. ಬಂಗಾರಪ್ಪ.—೭೩ ಎಂದರೆ ಏನು ?

ಅಧ್ಯಕ್ಷರು.—ಕಾಲಿಂಗ ಅಟೆನ್‌ಷನ್.

ಶ್ರೀ ಎಸ್. ಬಂಗಾರಪ್ಪ.—ಕ್ಷಮಿಸಬೇಕು, ಕಾಲಿಂಗ ಅಟೆನ್‌ಷನ್ ಆಗಬಾರದು. ಅದರಲ್ಲಿ ವಿವರಗಳನ್ನು ಹೇಳುವುದಕ್ಕಾಗುವುದಿಲ್ಲ.

ಅಧ್ಯಕ್ಷರು.—ನಾನು ಈಗಾಗಲೇ ರೂಲಿಂಗ್ ಕೊಟ್ಟಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ರೂಲಿಂಗ್ ಕೊಡಿ, ಬೇಡವೆಂದು ಹೇಳುವುದಿಲ್ಲ.

MR. CHAIRMAN.—At least we will get the statement.

ಶ್ರೀ ಎಸ್. ಬಂಗಾರಪ್ಪ.—ಸ್ಟೇಟ್‌ಮೆಂಟ್ ಕೊಡುವುದಕ್ಕಲ್ಲ, ದಯವಿಟ್ಟು ಗಮನಿಸಬೇಕು, ನಮಗೆ ರಕ್ಷಣೆ ಕೊಡಬೇಕು. ನಾವು ಸದನಕ್ಕೆ ವಿವರಗಳನ್ನು ಕೊಡಬೇಕಾಗುತ್ತದೆ.....

ಅಧ್ಯಕ್ಷರು.—ಪ್ರಶ್ನೋತ್ತರ ಮುಂಗಿದ ತಕ್ಷಣ ತಾವು ಎತ್ತಬೇಕಾಗಿತ್ತು.

ಶ್ರೀ ಎಸ್. ಬಂಗಾರಪ್ಪ.—I don't mind converting that into a call attentions. matter of discussion.. ...ಗಮನ ಸೆಳೆಯುವ ಸೂಚನೆಯಿಂದ ಇದಕ್ಕೆ ಪರಿಹಾರ ಸಿಕ್ಕುವುದಿಲ್ಲ. ತಾವು ದಯವಿಟ್ಟು ವಿಚಾರ ಮಾಡಿ.

MR. CHAIRMAN.—I have gone to the next business. Adjournment Motion gets the priority. You could have raised immediately after the question hour.

ಶ್ರೀ ಎಸ್. ಬಂಗಾರಪ್ಪ.—ಈಗ ನಿಲುವಳಿ ಸೂಚನೆ ಮುಖಾಂತರ ಈ ವಿಷಯವನ್ನು ಚರ್ಚೆ ಮಾಡಲೇಬೇಕು ಎಂಬ ಆಸೆ ನಮಗೆ ಇದೆ. ಏಕೆಂದರೆ ಅಲ್ಲಿ ಪರಿಸ್ಥಿತಿ ಆ ರೀತಿ ಇದೆ. ಈಗ ವಿವರಗಳಿಗೆ ನಾನು ಹೋಗುವುದಿಲ್ಲ. ತಾವು ಅನುಮತಿ ಕೊಡಬೇಕು, ವಿಷಯವನ್ನು ಪ್ರಸ್ತಾಪ ಮಾಡಬೇಕಾಗುತ್ತದೆ. ಗಮನ ಸೆಳೆಯುವ ಸೂಚನೆಗೆ ಅನುಮತಿ ಕೊಡುವ ಹಾಗಿದ್ದರೆ, ಅದರಲ್ಲಿ ಹೇಳುವುದಕ್ಕಾಗುವುದಿಲ್ಲ. ೧೫ ಸಾವಿರ ಮನೆಗಳನ್ನು ನೋಟಿಫಿಕೇಷನ್ ಮಾಡಿ.....

ಅಧ್ಯಕ್ಷರು.—ಸಂಬಂಧಪಟ್ಟ ಮಂತ್ರಿಗಳು ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ಸದನದಲ್ಲಿ ಈಗಾಗಲೇ ವಿಷಯ ಬಂದಿದೆ. ಕೆಲವು ಗ್ರಾಮಗಳಿದೂ ಬಂದಿದೆ, ಕೆಲವು ಗ್ರಾಮಗಳಿದ್ದು ಬಂದಿಲ್ಲ. ಈ ಮನೆಯ ೭–೮ ಜನ ಸದಸ್ಯರು, ಕಾಂಗ್ರೆಸ್—(ಐ) ಮಿತ್ರರೂ ಸ್ಪಾಟ್ ಇನ್‌ಸ್ಪೆಕ್ಷನ್‌ಗೆ ಹೋಗಿ ಬಂದಿದ್ದೇವೆ. ಅದಕ್ಕೆ ಎಲ್ಲರೂ ಸಹಿ ಮಾಡಿದ್ದೇವೆ.

MR. CHAIRMAN.—We will some how find out a way out.

ಶ್ರೀ ಎಸ್. ಬಂಗಾರಪ್ಪ.—In the mean whlle discussion ಆಗುವುದಕ್ಕೆ ಮೊಹಲು ಒಂದು ಕೆಲಸ ಮಾಡಬೇಕು. ಅಲ್ಲಿ ಇರತಕ್ಕಂತಹ ಗುಡಿಸಲುಗಳಲ್ಲಿ ರೋಡಿಗ್ ಬಂದಿರುವಂತಹವು ಗಳನ್ನು ಮಾತ್ರ ತೆಗೆಯುತ್ತೇವೆಂದು ಹೇಳಿದ್ದಾರೆ. ಅಲ್ಲಿ ಒಂದು ಗುಡಿಸಲೂ ಇಲ್ಲ ೧೩–೧೪ ಸಾವಿರ ಮನೆಗಳಿದ್ದು, ಅಲ್ಲಿ ವರ್ತುಲ ರಸ್ತೆ (ರಿಂಗ್ ರೋಡ್) ಮಾಡಬೇಕೆಂದು ಹೇಳಿದ್ದೀರಿ. ಇದಕ್ಕೆ ಜನರ ಆಕ್ಷೇಪಣೆ ಇಲ್ಲ ಈಗಲೂ ಕೂಡ ನಾನು ವಿವರಗಳಿಗೆ ಹೋಗುವುದಿಲ್ಲ

ಶ್ರೀ ಎಂ. ಚಂದ್ರಶೇಖರ್ (ನಗರಾಭಿವೃದ್ಧಿ ಸಚಿವರು).—ಅವಕಾಶ ಕೊಟ್ಟರೆ ಉತ್ತರ ಕೊಡುತ್ತಿದ್ದೆ. ಅಲ್ಲಿ ಏನೂ ಆಗಿಲ್ಲ. ಸ್ಥಳಕ್ಕೆ ಹೋಗಿ ನೋಡಿಕೊಂಡು ಬಂದು ಪ್ರಸ್ತಾಪ ಮಾಡಿದರೆ ಸರಿ ಹೋಗುತ್ತದೆ.

ಶ್ರೀ ಎಸ್. ಬಂಗಾರಪ್ಪ.—ನಾನು ಮೊದಲೇ ಹೇಳಿದೆ. ಸ್ಥಳಕ್ಕೆ ೮–೧೦ ಜನ ಶಾಸಕರು ಹೋಗಿ ಬಂದು ನಿಲುವಳಿ ಸೂಚನೆಯನ್ನು ಸಭಾಧ್ಯಕ್ಷರಿಗೆ ನಿಲುವಳಿ ಸೂಚನೆ ಕಳುಹಿಸಿಕೊಟ್ಟಿದ್ದೇವೆ. ನೋಡದೆ ಕಳುಹಿಸಿಕೊಟ್ಟಿಲ್ಲ.

ಶ್ರೀ ಎಂ. ಚಂದ್ರಶೇಖರ್.—ದಯವಿಟ್ಟು ಆ ರೀತಿ ಅಲ್ಲಿ ಏನಾದರೂ ಆಗಿದ್ದರೆ ಹೇಳಿ.

ಅಧ್ಯಕ್ಷರು.—ಇದರಲ್ಲಿ ಎರಡು ಭಾಗ ಇದೆ. ಮೊದಲನೇ ಭಾಗ ಪ್ರಸ್ತಾಪವಾಗಿದೆ. ಇವರು ಕಳುಹಿಸಿರುವುದು ಇನ್ನೊಂದು ಭಾಗ ಉತ್ತರ ಕಳಿಸಿ ನಾಳೆ ಇನ್ನೊಂದು ರೀತಿಯಲ್ಲಿ ತೆಗೆದು ಕೊಳ್ಳೋಣ

ಶ್ರೀ ಬಿ. ಎಸ್. ಎಡಿಯೂರಪ್ಪ (ಶಿಕಾರಿಪುರ).—ಸ್ಥಳಕ್ಕೆ ಹೋಗಿ ನೋಡಿಕೊಂಡು ಬಂದಿದ್ದೇವೆ, ಆರ್.ಸಿ.ಸಿ. ಬಿಲ್ಡಿಂಗ್‌ಗಳು ಹೋಗುತ್ತಿವೆ. ಟೆಲಿಫೋನ್ ಮಾಡಿ ಮಾನ್ಯಮಂತ್ರಿಗಳ ಗಮನಕ್ಕೆ ತೆಗೆದು ಕೊಂಡು ಬಂದಿದ್ದೇನೆ. ಮಾನ್ಯಮಂತ್ರಿಗಳು ಸ್ಥಳಕ್ಕೆ ಹೋದರೆ ವಿಚಾರ ತಿಳಿಯುತ್ತದೆ, ಅಲ್ಲಿರತಕ್ಕಂಥ ೩೨೦ ಜನ ಬಂದಿತರಾಗಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ, ಅಲ್ಲಿ ಏನಾಗಿದೆ ಎಂದರೆ, ಕಟ್ಟಿಸಿರತಕ್ಕಂಥಾ ಮನೆಗಳಿಗೆ ವಿದ್ಯುತ್‌ಚಕ್ತಿ ಕೊಟ್ಟಿದ್ದಾರೆ, ಅವರೆಲ್ಲಾ ಬೋರ್‌ವೆಲ್ ಹಾಕಿಕೊಂಡಿದ್ದಾರೆ, ಎಲ್ಲರೂ ಸಹ ೭–೮ ಲಕ್ಷ ರೂಪಾಯಿಗಳನ್ನು ವಿರ್ಚು ಮಾಡಿ ದೊಡ್ಡ ದೊಡ್ಡ ಟೆರೇಸ್‌ಕಟ್ಟಡ ಕಟ್ಟಿಕೊಂಡಿದ್ದಾರೆ. ಆ ಜಾಗದಲ್ಲಿ ಅನೇಕ ಜನ ಕೂಲಿಗಾರರೂ ಇದ್ದಾರೆ, ಆಸ್ಪೆಸ್ಟಾಸ್‌ಶೀಟ್ ಹಾಕಿಕೊಂಡವರೂ ಇದ್ದಾರೆ, ಸುಮಾರು ೬೫ ಪರ್ಸೆಂಟ್ ಜನ ಪೆಡ್ಯೂಲ್ಡ್ ಕ್ಯಾಸ್ಟ್‌ನವರೂ ಇದ್ದಾರೆ. ಅವರು ತಮ್ಮ ತಮ್ಮ ಯೋಗ್ಯತೆಗೆತಕ್ಕಂತೆ ಬ್ಯಾಂಕ್ ಮತ್ತಿತರ ಕಡೆ ಸಾಲಗಳನ್ನು ತೆಗೆದುಕೊಂಡು ಮನೆಗಳನ್ನು ಕಟ್ಟಿಕೊಂಡಿದ್ದಾರೆ. ಈ ಬಗ್ಗೆ ೧೯೭೬ರಲ್ಲಿ ಏನು ನೋಟಿಫಿಕೇಷನ್ ಆಯಿತೋ ಅದನ್ನು ವಿಥ್‌ಡ್ರಾ ಮಾಡಿದ್ದೀರಿ. ಮತ್ತೆ ಅದನ್ನು ಬಿ.ಡಿ.ಎ. ಮುಖಾಂತರ ಇನ್‌ಸಿಸ್ಟ್‌ಮಾಡಿ ಅಕ್ವಿಸಿಷನ್ ಪ್ರೊಸೀಡಿಂಗ್ಸ್ ಮಾಡುತ್ತಾ ಇದ್ದೀರಿ. ಅದೆಂದರಿಂದ ನಾನು ಇದರ ಬಗ್ಗೆ ಚರ್ಚೆ ಮಾಬೇಕು ಅಂತ ಹೇಳುತ್ತಾ ಇದ್ದೇನೆ. ಅಷ್ಟೇ ಅಲ್ಲ, ಅಲ್ಲಿರುವ ಪೆಣ್ಣುಮಕ್ಕಳು ಮತ್ತು ಗಂಡುಮಕ್ಕಳು ಏನು ಹೇಳುತ್ತಾರೆ ಎಂದರೆ ನಮ್ಮ ಬಿಲ್ಡಿಂಗ್ಸ್ ಅನ್ನು ಒಡೆಯುತ್ತಿದ್ದಾರೆ, ಅಲ್ಲದೆ ನಮ್ಮನ್ನೂ ಕೂಡ ಹೊಡೆಯುತ್ತಾರೆ, ಬೂಟ್ಸ್‌ಕಾಲಿನಲ್ಲಿ ಒಡೆಯುತ್ತಿದ್ದಾರೆ ಎಂದು ಹೇಳುತ್ತಿದ್ದಾರೆ ಅವರು ಅಲ್ಲಿ ಮನೆಗಳನ್ನು ಕಟ್ಟಿಕೊಂಡು ೧೦–೧೫ ವರ್ಷಗಳಿಂದಲೂ ವಾಸವಾಗಿದ್ದಾರೆ. ತಮಗೆ ಇನ್ನೂ ಹೇಳಬೇಕು ಎಂದರೆ ತಮಗೆ ಬೇಕಾದ ಕಡೆ, ಸುಮ್ಮನಿರುವುದು, ಅಂದರೆ ನಿಮಗೆ ಮಂಡಿವಾಳ ಪುದೇಶ ಬೇಕಾಗಿತ್ತು, ಅಲ್ಲಿಂದ ನೀವು ಮಂತ್ರಿಯಾಗಬೇಕಾಗಿತ್ತು, ಅದಕ್ಕೋಸ್ಕರವಾಗಿ ಅಲ್ಲಿನವರಿಗೆ ಖಾಯಂ ಮಾಡುವುದು, ಬೇಡವಾದ ಕಡೆ ಬಿಲ್ಡಿಂಗ್ಸ್ ಒಡೆಯುವುದು ಎಂದರೆ ಏನು ಅರ್ಥ ?

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಸದಸ್ಯರು ಹೇಳುವ ಮಾತು ೧೫ ದಿನದ ಹಿಂದಿನ ಮಾತು. ಈಗೊತ್ತು ಹೋಗಿ ನೋಡಿಕೊಂಡು ಬಂದರೆ ಗೊತ್ತಾಗುತ್ತದೆ. ನಾನು ಈ ಮನೆಯಲ್ಲೂ ಮತ್ತೆ ಮೇಲ್ಮನೆಯಲ್ಲೂ ಕೂಡ ಆಶ್ವಾಸನೆ ಕೊಟ್ಟಿರುವುದು ಏನೆಂದರೆ ರಸ್ತೆಗಳು ನೇರವಾಗಿ ಎಲ್ಲಿ ಮಾಡಬೇಕಾಗಿದೆಯೋ ಅಲ್ಲಿ ನೋಡಿಕೊಂಡು ಈ ಕೆಲಸ ಮಾಡುತ್ತೇವೆ. ಸಾಧ್ಯವಾದಷ್ಟು ಪಂಟ್ಟಿಗೆ ಅಲ್ಲಿ ಏನಾದರೂ ಭದ್ರವಾದ ಕಟ್ಟಡಗಳು ಇದ್ದರೆ, ಒಡೆಯಲೇಬೇಕಾಗುವ ಸನ್ನಿವೇಶ ಬಂದರೆ ಅದನ್ನು ನೋಡಿ ಮಾಡಬೇಕಾಗುತ್ತದೆ, ಅಂತಹವರಿಗೆ ಬೇರೆ ರೀತಿಯಾಗಿ ಯಾವ ಪರಿಹಾರ ಕೊಡಬೇಕು ಅನ್ನುವುದನ್ನೂ ಯೋಚನೆ ಮಾಡೋಣ ಅಂತ ಹೇಳಿದ್ದೇನೆ. ಆ ಜನರಿಗೆ ಅನಾನುಕೂಲ ಇಲ್ಲದ ಹಾಗೆ ಕೆಲಸಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಆದರೆ ನೇರವಾಗಿ ರಸ್ತೆ ಮಾಡಬೇಕಾಗುವ ಸಂದರ್ಭ ಬಂದಾಗ ಆ ಬಿಲ್ಡಿಂಗ್ ಅನ್ನು ಒಡೆಯಲೇ ಬೇಕಾಗುತ್ತದೆ. ಅಂಥಾ ಸಂದರ್ಭದಲ್ಲಿ ಅವರಿಗೆ ಬೇರೆ ಪರಿಹಾರ ಕೊಡುವ ಯೋಚನೆಯನ್ನೂ ಸಹ ಮಾಡಿದ್ದೇವೆ. ಮಾನ್ಯ ಸದಸ್ಯರು ಹೇಳತಕ್ಕಂಥಾ ಮಾತು ೧೫ ದಿವಸದ ಹಿಂದಿನ ಮಾತು. ಇತ್ತೀಚೆಗೆ ಯಾವುದೂ ಸಹ ಹಾಗೆ ನಡೆದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ನಾನು ಮತ್ತು ನನ್ನ ಕೆಲವು ಮಿತ್ರರು ನಿನ್ನೆ ದಿವಸ ಹೋಗಿ ನೋಡಿ ಕೊಂಡು ಬಂದಿದ್ದೇವೆ. ಅದಕ್ಕೋಸ್ಕರವಾಗಿ ನಾನು ಹೇಳುತ್ತಿದ್ದೇನೆ.

ಶ್ರೀ ಪಿ. ರಾಂದೇವ್.—ಸ್ವಾಮಿ, ಮಾನ್ಯ ಬಂಗಾರಪ್ಪನವರು ಮಾತನಾಡುತ್ತಾ ಇರುವುದನ್ನು ನೋಡಿದರೆ ಅವರಿಗೇನಾದರೂ ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅವಕಾಶ ಕೊಟ್ಟಿದ್ದೀರಾ ಹೇಗೆ ?

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ ಇದಕ್ಕೆ ಉತ್ತರ ಕೊಟ್ಟಿದ್ದಾರೆ. ಏನೆಂದರೆ ಹಿಂದೆ ನಾನು ಈ ವಿಷಯದ ಬಗ್ಗೆ ಹಿಂದೆ ಏನು ಹೇಳಿದ್ದೆನೋ ಅದು ಒಂದು ಭಾಗ ಆಯಿತು. ಇದು ಬೇರೆ, ಇದು ಎರಡನೇ ಭಾಗ ಎಂದು ಹೇಳಿದ್ದಾರೆ, ಆದರಿಂದ ನಾನು ಈ ಮಾತು ಹೇಳುತ್ತಿದ್ದೇನೆ.

ಅಧ್ಯಕ್ಷರು.—ಅದರ ವಿವರಗಳನ್ನು ನಾಳೆ ತರಿಸೋಣ.

ಶ್ರೀ ಎಸ್. ಬಂಗಾರಪ್ಪ.—ನಾನು ಬಹು ಪ್ರಮುಖವಾಗಿ ಈ ವಿಷಯವನ್ನು ಏತಕ್ಕೆ ಚರ್ಚೆ ಮಾಡುತ್ತಿದ್ದೇನೆಂದರೆ ಅಲ್ಲಿ ಪೋಲೀಸಿನವರನ್ನು ಇಟ್ಟಿದ್ದೀರಲ್ಲಾ ಅವರನ್ನು ಮೊದಲು ಅಲ್ಲಿಂದ ತೆಗೆಯ ಬೇಕು ಎಂದು ಹೇಳುತ್ತೇನೆ.

ಅಧ್ಯಕ್ಷರು.—ತಮಗೆ ಅರಿಕೆ ಮಾಡಿಕೊಳ್ಳುತ್ತೇನೆ. ನಾಳೆ ದಿವಸ ಇದರ ಬಗ್ಗೆ ಡೀಟೈಲ್ ರಿಪೋರ್ಟ್ ತರಿಸೋಣ. ಚರ್ಚೆ ಮಾಡೋಣ. ಆದುದರಿಂದ ತಾವು ಕೊಟ್ಟಿರತಕ್ಕಂಥಾ ಈ ಒಂದು ನಿಲುವಳಿ ಸೂಚನೆಯನ್ನು ಡಿಸ್‌ಅಲೋಮಾಡಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಇಲ್ಲಿ ಎರಡು ಮುಖ್ಯವಾದ ಅಂಶಗಳು ಇವೆ. ಒಂದು ನಾನು ಮೊದಲೇ ಹೇಳಿದ ಹಾಗೆ ಅಲ್ಲಿಂದ ಪೋಲೀಸ್ ವ್ಯಾನ್ ಅನ್ನು ತೆಗೆಸುವುದು. ಎರಡನೆಯದು.

ಅಧ್ಯಕ್ಷರು.—ನಾನು ಆ ಡೀಟೈಲ್ಸ್‌ನ್ನು ನೋಡಿದ್ದೇನೆ. ನೀವು ಕೊಟ್ಟಿರುವುದು ಎರಡನೇ ಭಾಗದ್ದು, ಹಿಂದಿನದಲ್ಲ.

ಶ್ರೀ ಎಸ್. ಬಂಗಾರಪ್ಪ.—ನೀವು ಈ ಬಗ್ಗೆ ಸರಿಯಾದ ವಿಷಯಗಳನ್ನು ತಿಳಿದುಕೊಂಡಿದ್ದೀರಿ. ಅದಕ್ಕಾಗಿ ನಾನು ನಿಮ್ಮನ್ನು ವಂದಿಸುತ್ತೇನೆ. ಆದರೆ ಇಲ್ಲಿ ವಿಷಯ ಏನೆಂದರೆ ಅಲ್ಲಿ ಪೋಲೀಸಿನವರನ್ನು ಇಟ್ಟಿದ್ದಾರಲ್ಲಾ ಏತಕ್ಕೆ ? ಮಾನ್ಯ ಮಂತ್ರಿಗಳು ಅಲ್ಲಿ ಏನೂ ಡೆಮಾಲಿಷ್ ಮಾಡುತ್ತಾ ಇಲ್ಲಾ ಅಂತ ಹೇಳುತ್ತಿದ್ದಾರಲ್ಲ, ಹಾಗಾದರೆ ಏತಕ್ಕೆ ಅಲ್ಲಿ ಪೋಲೀಸಿನವರನ್ನ ಇಟ್ಟಿದ್ದಾರೆ ? ಅದೇ ನನ್ನ ಮುಖ್ಯ ಪ್ರಶ್ನೆ.

ಶ್ರೀ ಎಂ. ಚಂದ್ರಶೇಖರ್.—ಅಲ್ಲಿ ಕೆಲಸ ಮಾಡುತ್ತಾ ಇರತಕ್ಕ ಹೆಣ್ಣು ಮಕ್ಕಳು ಮತ್ತು ಕೂಲಿಗಾರರು ಏನು ಇದ್ದಾರೆ ಅವರಿಗೆ ರಕ್ಷಣೆ ಕೊಡುವುದಕ್ಕೋಸ್ಕರ ಅಲ್ಲಿ ಪೋಲೀಸಿನವರನ್ನು ಇಟ್ಟಿರುವುದು. ಅಲ್ಲಿ ಯಾವ ತೊಂದರೆಯೂ ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ನಿಮ್ಮ ಬಾಯಿಂದ ಈ ಮಾತು ಬರುತ್ತದೆ ಎನ್ನುವುದು ನನಗೆ ಮೊದಲೇ ಗೊತ್ತಿತ್ತು. ಹಾಗಾದರೆ ಅಲ್ಲಿ ಯಾವ ತೊಂದರೆಯೂ ಇಲ್ಲದೇ ಹೋದಮೇಲೆ ಅಲ್ಲಿ ಜನ ಏತಕ್ಕೆ ಇದರ ವಿರುದ್ಧ ಗಲಾಟೆ ಮಾಡುತ್ತಿದ್ದಾರೆ, ಅವರಿಗೇನು ಬೇರೆ ಕಸುಬೇನೂ ಇಲ್ಲವೇ ?

ಈ ಸಂದರ್ಭದಲ್ಲಿ ಈ ಸಭೆಯ ಗಮನಕ್ಕೆ ತರುವುದೇನೆಂದರೆ ಅಲ್ಲಿ ಏನಾದರೂ ೧೦೦ ಅಥವಾ ೨೦೦ ಅಡಿ ರಸ್ತೆಯನ್ನು ಮಾಡಬೇಕೆಂದಿದ್ದರೆ ಆ ಕೆಲಸಕ್ಕೆ ಅವರು ಯಾರೂ ಅಡ್ಡಿ ಮಾಡುವುದಿಲ್ಲ. ಅಲ್ಲಿ ಇರತಕ್ಕಂಥ ತೊಂದರೆ ಏನು ಎಂದರೆ ಬಿ.ಡಿ.ಎ. ಮುಖಾಂತರ ಅಲ್ಲಿ ಲೇಔಟ್ ಮಾಡುತ್ತಿದ್ದಾರೆ, ಆ ಸರ್ವೆ ನಂಬರ್ಸ್ ಅನ್ನು ಡೀನೋಟಿಫೈ ಮಾಡಿ ಅಲ್ಲಿ ಕಟ್ಟಿರತಕ್ಕಂಥಾ ಮನೆಗಳನ್ನು ಒಡೆಯುತ್ತಿದ್ದಾರೆ. ಹಾಗೆ ಅದನ್ನು ಒಡೆಯುವುದಕ್ಕೆ ಬರುವುದಿಲ್ಲ ಅನ್ನುವುದೇ ನನ್ನ ಅಭಿಪ್ರಾಯ. ಅದಕ್ಕಾಗಿ ನಾನು ಹೇಳುವುದೇನೆಂದರೆ ಅಲ್ಲಿ ಕಟ್ಟಿರತಕ್ಕಂಥಾ ಬಿಲ್ಡಿಂಗ್ಸ್‌ನ್ನು ಒಡೆಯುವುದು ಮೊದಲನೇ ತಪ್ಪು. ಆದರೆ ಅವಶ್ಯ ಇದ್ದ ಕಡೆ ರಸ್ತೆ ಮಾಡಲೇಬೇಕು ಎನ್ನುವ ಕಡೆ ಈ ಪ್ರಶ್ನೆ ಬರುತ್ತದೆ. ಆಗ ಅವರಿಗೆ ಬೇರೆ ಪರಿಹಾರ ಕೊಟ್ಟು ಆ ಕೆಲಸ ಮಾಡಬೇಕಾಗುತ್ತದೆ. ಈ ವಿಷಯವನ್ನು ಅವರಿಗೆ ನಾವು ಎಲ್ಲಾ ಶಾಸಕರೂ ಸೇರಿ ಹೇಳಿದ್ದೇವೆ. ಆದುದರಿಂದ ಅಲ್ಲಿ ನೀವು ಪೋಲೀಸರನ್ನು ಏನು ಇಟ್ಟಿದ್ದೀರಿ ಅವರನ್ನು ಮೊದಲು ಹಿಂದಕ್ಕೆ ಕರೆಸಿ. ಎರಡನೆಯದು: ೧೯೭೬ ರಲ್ಲಿ ಇದು ಡೀನೋಟಿಫೈ ಆದ ಮೇಲೆ ಈ ಮನೆಗಳನ್ನು ಕಟ್ಟಿದ್ದಾರೆ. ಆ ಏರಿಯಾವನ್ನು ಬರೀ ಕಾಲಿನಲ್ಲಿ ತಿರುಗಾಡಿಕೊಂಡು ಹೋಗಿ ನೋಡಿಕೊಂಡು ಬರುವುದಕ್ಕೆ ಆಗುವುದಿಲ್ಲ. ಕಾರಿನಲ್ಲಿ ಸುತ್ತಿದರೂ ಸಹ ಅದನ್ನು ನೋಡಿಕೊಂಡು ಬರಲಂ ಎರಡು ಗಂಟೆಗಳ ಕಾಲ ಬೇಕಾಗುತ್ತದೆ. ಆದುದರಿಂದ ಅಲ್ಲಿ ತಾವು ಏನು ಪೋಲೀಸಿನವರನ್ನು ಇಟ್ಟಿದ್ದೀರಿ ಅವರನ್ನು ವಾಪಸ್ಸು ಕರೆಸಿ ಎಂದು ಹೇಳುತ್ತೇನೆ. ಮತ್ತು ಏರಿಯಾದಲ್ಲಿ ಮಿಲಿಟರಿಯವರಿಗೆ ಏನು ನಿವೇಶನಗಳನ್ನು ಕೊಟ್ಟಿದ್ದೀರಿ ಅದರ ಪಕ್ಕದಲ್ಲೇ ಕ್ರಿಶ್ಚಿಯನ್ಸ್ ಮತ್ತು ಇನ್ನೂ ಇತರರ ಮನೆಗಳು ಇವೆ. ಅದನ್ನು ಸರ್ವೆ ಮಾಡುವುದಕ್ಕೆ ಎತ್ತರದ ಒಂದು ಯಂತ್ರದ ಮುಖಾಂತರ ಮಾಡುತ್ತಿದ್ದೀರಿ. ಆ ಮನೆಗಳನ್ನೂ ಸಹ ಒಡೆಯುವ ಕಾರ್ಯಕ್ರಮಕ್ಕೆ ಆರೀತಿ ಮಾಡುವುದು ಸರಿಯಲ್ಲ.

ಶ್ರೀ ಎಂ. ಚಂದ್ರಶೇಖರ್.—ಆ ಒಂದು ಎತ್ತರದ ಯಂತ್ರದ ಮುಖಾಂತರ ಅವರಂ ಅದನ್ನು ಏತಕ್ಕೆ ಸರ್ವೆ ಮಾಡುತ್ತಿದ್ದಾರೆ. ಎಂದರೆ ಅಲ್ಲಿಂದ ಎಷ್ಟು ದೂರ ಮನೆಗಳು ಬಂದಿವೆ ಎನ್ನುವುದನ್ನು ನೋಡುವುದಲ್ಲದೆ. ಏನಾದರೂ ಅಲ್ಲಿ ರಸ್ತೆ ಬಂದರೆ ಅದರ ಪಕ್ಕದಲ್ಲೇ ಆ ರಸ್ತೆಯನ್ನು ಮಾಡಬಹುದೇ, ಅಥವಾ ಅದನ್ನು ಒಂದು ಪಕ್ಕಕ್ಕೆ ಶಿಫ್ಟ್ ಮಾಡಬಹುದೇ ಎನ್ನುವುದನ್ನು ತಿಳಿದುಕೊಳ್ಳಲಂ ಸರ್ವೆ ಮಾಡುತ್ತಿದ್ದಾರೆ. ಇದು ತಪ್ಪೇ ? ಅಲ್ಲಿ ಏನಾದರೂ ಸಿಂಗಲ್ ಬಿಲ್ಡಿಂಗ್ ಇದ್ದರೆ ಏನಾದರೂ ರಸ್ತೆ ಮಾಡುವುದಕ್ಕೆ ಅಡಿ ಆಗುತ್ತದೋ ಇಲ್ಲವೋ ಎನ್ನುವುದನ್ನು ನೋಡುವುದಕ್ಕೆ ಆ ರೀತಿ ಸರ್ವೆ ಮಾಡುತ್ತಿದ್ದಾರೆ. ಇದುವರೆಗೆ ಅಲ್ಲಿ ಒಂದು ಸಿಂಗಲ್ ಬಿಲ್ಡಿಂಲ್ ಅನ್ನೂ ಕೂಡಾ ಒಡೆದಿಲ್ಲ.

ಶ್ರೀ ಎಸ್. ಬಂಗಾರಪ್ಪ.—ಹಾಗೆ ಒಡೆಯುವುದಕ್ಕೆ ಅಲ್ಲಿನ ಜನ ಬಿಟ್ಟಿಲ್ಲಾ ಅದಕ್ಕೆ ಒಡೆದಿಲ್ಲ.

ಶ್ರೀ ಎಂ. ಚಂದ್ರಶೇಖರ್.—ಅಲ್ಲಿ ನೂರಾರು ಅಲ್ಲ, ಸಾವಿರಾರು ಮನೆಗಳು ಇವೆ. ಅದಕ್ಕೆ ಬೇರೆರೀತಿಯಾದಂಥಾ ವ್ಯವಸ್ಥೆ ಮಾಡುವುದಕ್ಕೆ ನಾವು ಕಾರ್ಯಕ್ರಮ ತೆಗೆದುಕೊಳ್ಳಲಿಕ್ಕೆ ಅವಶು ಆ ಯಂತ್ರವನ್ನು ಉಪಯೋಗಿಸಿ ಸರ್ವೆ ಮಾಡುತ್ತಿದ್ದಾರೆ. ತಪಂಗೆ ಹೇಳಬೇಕಾದರೆ ಶ್ರೀನಿವಾಸನಗರ, ಶ್ರೀನಗರ ಮತ್ತು ವೆಸ್ಟ್ ಆಫ್ ಕಾರ್ಡ್ ರೋಡ್‌ನಲ್ಲಿ ಹೇಗೆ ಮಾಡಿದ್ದೇವೋ ಹಾಗೆ ಮಾಡುತ್ತೇವೆ. ಆ ಜಾಗದಲ್ಲಿ ಎಲ್ಲಿ ದೊಡ್ಡ ದೊಡ್ಡ ಮನೆಗಳು ಬಂದಿವೆ ಸಾಧ್ಯವಾದಷ್ಟು ಮಟ್ಟಿಗೆ ಅದರ ಪಕ್ಕದಲ್ಲೇ ರಸ್ತೆ ಮಾಡುವ ಹಾಗಿನ್ನರೆ ಮಾಡಬಹುದೇ ಅದನ್ನು ಯೋಚನೆ ಮಾಡುತ್ತೇವೆ. ಖಾಲಿ ವುದೇಶ ಇದ್ದರೆ ಅಲ್ಲಿ ರಸ್ತೆ ಮಾಡಬೇಕಾಗುವ ಸಂದರ್ಭ ಬಂದರೆ ಅಂಥ ಕಡೆ ಮಾಡಬೇಕಾಗುತ್ತದೆ ಆದರೆ ಸಾಧ್ಯವಾದಷ್ಟೂ ಕೂಡ ಒಬ್ಬರಿಗೂ ತೊಂದರೆಯಾಗದೇ ಇದ್ದ ಹಾಗೆ ಈ ಕೆಲಸ ಮಾಡುವುದಕ್ಕೆತಕ್ಕ ವ್ಯವಸ್ಥೆ ಮಾಡುತ್ತೇವೆಂದು ಎರಡೂ ಮನೆಯಲ್ಲಿ ಆಶ್ವಾಸನೆಯನ್ನು ಕೊಟ್ಟಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಇದೇರೀತಿ ಆಸ್ವಾಸನೆ ಕೊಟ್ಟಮೇಲೆ ಮತ್ತೆ ಆ ಭಾಗದಲ್ಲಿ ಮನೆ ಒಡೆಯುತ್ತಾ ಇರುವುದೇ ನಾನು ಈ ಒಂದು ನಿಲುವಳಿ ಸೂಚನೆಯನ್ನು ಕೊಟ್ಟಿರುವ ಉದ್ದೇಶ.

ಶ್ರೀ ಎಂ. ಚಂದ್ರಶೇಖರ್.—ಅವರು ಹೇಳುವುದು ೧೫ ದಿವಸದ ಹಿಂದಿನ ಮಾತು.

ಶ್ರೀ ಎಸ್. ಬಂಗಾರಪ್ಪ.—ತಾವು ಬನ್ನಿ ತೋರಿಸುತ್ತೇನೆ. ನಿನ್ನೆ ದಿವಸ ಹೋಗಿ ನೋಡಿಕೊಂಡು ಬಂದಿದ್ದೇವೆ. ಅಲ್ಲಿ ಮಿಲಿಟರಿ ಭಾಗ ಏನು ಇದೆ ಅಲ್ಲಿ ಸರ್ವೆ ನಡೆಸುತ್ತಿದ್ದಾರೆ

ಶ್ರೀ ಎಂ. ಚಂದ್ರಶೇಖರ್.—ನಾನು ಹೋಗಿ ನೋಡಿದ್ದೇನೆ. ಅಲ್ಲಿ ಸರ್ವೆ ಮಾಡುವ ಉದ್ದೇಶ ಅಲ್ಲಿ ಬಹಳ ಮನೆಗಳನ್ನು ಏನು ಕಟ್ಟಿದ್ದಾರೆ ಅದು ಹೋಗಬಾರದು ಎನ್ನುವ ಉದ್ದೇಶದಿಂದ ಈ ಸರ್ವೆ

ಮಾಡಿಸಂತಾ ಇದ್ದೇವೆ. ಒಂದು ವೇಳೆ ಅದರ ಪಕ್ಕಕ್ಕಾದರೂ ಕೂಡ ರಸ್ತೆ ಮಾಡಬಹುದೇ ನೋಡಿ ಅಂತ ಹೇಳಿದ್ದೇನೆ. ಏನೂ ತೊಂದರೆ ಇಲ್ಲದೇ ಹೋದರೆ ಅದನ್ನು ರೀಕನ್ಸೈ ಮಾಡಿಕೊಡುತ್ತೇನೆಂದು ನಾನಂ ಆಶ್ವಾಸನೆ ಕೊಟ್ಟಿದ್ದೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಅಧ್ಯಕ್ಷರೇ, ಈ ವಿಷಯ ನಾನು ಬಿಡಿಎ ಮೆಂಬರ್ ಆಗಿದ್ದಾಗಲೂ ಸಹ ಚರ್ಚೆಯಾಗಿದೆ. ಮಾನ್ಯ ಎಸ್. ಬಂಗಾರಪ್ಪನವರ ಅಭಿಪ್ರಾಯದಂತೆ ಅಲ್ಲಿ ಯಾವ ಮನೆಗಳನ್ನೂ ಕೂಡ ಒಡೆಯಕೂಡದು ಎನ್ನುವ ಅಭಿಪ್ರಾಯ ಅಲ್ಲಿನ ಜನಗಳಿಂದ ಬಂತು.

ಮನೆಗಳನ್ನು ಒಡೆಯಂವುದು ಬಿ.ಡಿ.ಎ. ವ್ಯಾಪ್ತಿಗೆ ಬಾರಿ ಹೋಗುವಂಥ ಪ್ರಶ್ನೆ. ಬಿ.ಡಿ.ಎ.ದು ಮನೆ ಒಡೆಯಂವ ಕೆಲಸ ಅಲ್ಲ. ಇದು ಎಲ್ಲರೂ ಒಪ್ಪಿಕೊಳ್ಳತಕ್ಕ ವಿಚಾರ. ಅಲ್ಲಿ ಮನೆಗಳನ್ನು ಕಟ್ಟಿದ್ದಾರೆಂದು ಮಾನ್ಯ ಬಂಗಾರಪ್ಪನವರು ಹೇಳಿದರು. ಅದು ನಿಜ. ಅನೇಕ ಮನೆಗಳನ್ನು ಕಟ್ಟಿದ್ದಾರೆ. ಬಿ.ಡಿ.ಎ. ಲೇಔಟ್ ಮಾಡಬೇಕಾದರೆ, ರೋಡ್ ಮಾಡಬೇಕು. ಅಲ್ಲಿ ಅಡ್ಡಾದಿಡ್ಡಿಯಾಗಿ ಮನೆಗಳು ಬಂಧಿವೆ. ಅಂತಹ ಕಡೆ ಏನು ಮಾಡಬೇಕೆಂದು ಅಭಿಪ್ರಾಯ ಇದೆ ಎಂದರೆ, ಅಂತಹವರಿಗೆ ಬೇರೆ ಜಾಗ ಹತ್ತಿರದಲ್ಲೇ ಕೊಡಬೇಕು, ಅವರಿಗೆ ಪರ್ಯಾಯ ವ್ಯವಸ್ಥೆ ಮಾಡಬೇಕು. ರೋಡ್ ಪುಥ್ಕೆ ಏನು ಮನೆ ಬರುತ್ತದೆ ಅಂತಹ ಕಡೆ, ರೋಡ್ ಮನೆತನಕ ಬರುತ್ತದೆ, ಅಲ್ಲಿಗೇ ನಿಂತು ಬಿಡುತ್ತದೆ. ರೋಡ್ ಅಲ್ಲಿತನಕ ಬರಂವುದು, ಅಲ್ಲಿ ನಿಂತು ಬಿಡುವುದು ಸರಿಯಲ್ಲ ಮನೆಗಳನ್ನು ಒಡೆಯಂವ ಬಗ್ಗೆ ಮಾನವೀಯ ದೃಷ್ಟಿಯಿಂದ ಹೇಳಬೇಕಾದರೆ ಯಾರು ಮನೆಗಳನ್ನು ಕಟ್ಟಿದ್ದಾರೆ ಅವರ ದೃಷ್ಟಿಯಿಂದ ಆ ಮನೆಗಳನ್ನು ಒಡೆಯಂವುದನ್ನು ಆದಷ್ಟು ತಪ್ಪಿಸತಕ್ಕ ಪ್ರಯತ್ನ ನಡೆಯುತ್ತಿದೆ. ಆದರೆ ಅಲ್ಲಿರುವ ಜನಗಳಿಗೆ ಈಗ ಭೀತಿ ಬಂದಿದೆ. ಅದನ್ನು ನಾವು ಹೋಗಲಾಡಿಸುವ ಪ್ರಯತ್ನ ಮಾಡಬೇಕು. ಮಾನ್ಯ ಮಂತ್ರಿಗಳು ಈಗಾಗಲೇ ಅದರ ಬಗ್ಗೆ ಆಶ್ವಾಸನೆ ಕೊಟ್ಟಿದ್ದಾರೆ. ಅದನ್ನೂ ಇಟ್ಟುಕೊಂಡು ಕೆಲಸ ಮಾಡುವುದು ಸರಿ ಎಂದು ನನಗನ್ನಿಸುತ್ತದೆ. ಇನ್ನು ಪೋಲೀಸರ ವಿಷಯ, ಪೊಲೀಸರನ್ನು ಅಲ್ಲಿರಂವುದು ಸರಿ ಎಂದು ನಾವು ಹೇಳಂವುದಿಲ್ಲ. ಪೊಲೀಸರು ಅಲ್ಲಿರುವುದು ನವಜನಗೂ ಸಂತೋಷ ಅಲ್ಲ, ಪೋಲೀಸರು ಅಲ್ಲಿರಕೂಡದು. ದುರಾದೃಷ್ಟವಶಾತ್ ಏನಾಗಿದೆ ಎಂದರೆ ಬಿ.ಡಿ.ಎ. ನೌಕರರನ್ನು, ಎಂಜಿನಿಯರಂಗಳನ್ನು, ಕಂಟ್ರಾಕ್ಟರುಗಳನ್ನು ಕೆಲವರು ಹೊಡೆದಿರುವುದು ಉಂಟು. ಸಂಬಂಧಪಟ್ಟವರು ನನ್ನ ಹತ್ತಿರ ಬಂದರು. ನಾನು ಹೇಳಿದೆ, ನೀವು ಏತಕ್ಕೆ ಆ ಕೆಲಸ ಮಾಡುವುದಕ್ಕೆ ಹೋದಿರಿ, ತಾವೇ ಬಂದು ನಿಂತುಕೊಂಡು ಒಡೆಯುದಹಾಗೆ ನೋಡಿಕೊಳ್ಳುತ್ತಿದ್ದೆವು, ನೀವು ಹೇಳಿಕಳುಹಿಸಿದ್ದರೆ ನಾವು ಬರುತ್ತಿದ್ದೆವು ಎಂದು ಹೇಳಿದಾಗ, ಯಾರೋ ಏನೋ ಮಾಡಿದ್ದಾರೆ, ಆವಾಗ ನಾವು ಇರಲಿಲ್ಲ ಎಂದು ಹೇಳಿದ್ದಾರೆ. ಪ್ರಶ್ನೆ ಏನೆಂದರೆ ಅಲ್ಲಿ ಬೇರೆ ಕೆಲಸಗಳೂ ನಡೆಯಂವುದಿಲ್ಲ. ಕೆಲಸ ನಡೆಯಂವ ಪರಿಸ್ಥಿತಿ ಇದ್ದರೆ, ಅಲ್ಲಿ ಪೋಲೀಸರು ಇರಬೇಕಾದ ವ್ರಮೆಯ ಇಲ್ಲ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ, ಅಲ್ಲಿನ ಯೂನಿಯನ್ ಸೆಕ್ರೆಟರಿ ಒಬ್ಬರು ಲೇಡಿ ಇದ್ದಾರೆ. ರಾತ್ರಿ ೧೨ ಗಂಟೆ ಹೊತ್ತಿನಲ್ಲಿ ಅವರ ಮನೆಯ ಗ್ಲಾಸಂಗಳನ್ನು ಒಡೆದು, ಬೆಳಿಗ್ಗೆ ೬ ಗಂಟೆಗೇ ಆ ಮಹಿಳೆಯನ್ನು ಅರೆಸ್ಟ್ ಮಾಡಿಕೊಂಡು ಬಂದಿದ್ದಾರೆ. ಬೂಡ್ಸ್ ಕಾಲಿನಲ್ಲಿ ಒಡೆಯುತ್ತೇವೆಂದು ಹೇಳಿದ್ದಾರೆ. ಸರ್ಕಲ್ ಇನ್‌ಸ್ಪೆಕ್ಟರ ಒಬ್ಬರು. ಆ ಲೇಡಿನ ಎಳೆದುಕೊಂಡು ಬೂಡ್ಸ್‌ನಲ್ಲಿ ಒದೆಯಿರಿ ಎಂದು ಹೇಳಿದರು ಎಂದು ತಿಳಿದು ಬಂದಿದೆ. ಆಕೆಯನ್ನು ಒದ್ದು ಹೊರಗಡೆ ಹಾಕಿದ್ದಾರೆ. ಎರಡನೆಯದು, ರೋಡ್ ಮಾಡುವಾಗ ಮನೆ ಅಥವಾ ಜಾಗ ಹೋದರೆ, ಬೇರೆ ಜಾಗ ಕೊಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದೇವೆಂದು ಹೇಳಬಹುದು. ಬರೀ ಆಶ್ವಾಸನೆ ಕೊಡುತ್ತೇವೆಂದು ಹೇಳಿದರೆ ನಡೆಯಂವುದಿಲ್ಲ. ಆಶ್ವಾಸನೆ ಕೊಟ್ಟಿರುವ ಕಡೆ ಅದು ನಡೆದಿಲ್ಲ. ನಾನು ನಿಮ್ಮನ್ನು ಪ್ರಾರ್ಥನೆ ಮಾಡಿಕೊಳ್ಳುವುದು ಏನೆಂದರೆ ರೋಡ್ ಎಲ್ಲಿ ಹೋಗುತ್ತದೆ, ಮನೆಗಳನ್ನು ಎಲ್ಲಿ ಒಡೆದು ಹಾಕುತ್ತೀರಿ, ಅವರು ಪರಿಹಾರ ಏನು ಬೇಡುತ್ತಿದ್ದಾರೆ, ಇವುಗಳನ್ನು ಪರಿಶೀಲಿಸಿ ಅಂತಹವರಿಗೆ ಸೈಟ್ ಕೊಡುತ್ತೇವೆಂದು ಲಿಖಿತ ಮೂಲಕ ಕೊಡಿ. ಮೊದಲು ಮನೆ ಒಡೆದು ಬಿಡುವುದು ಆಮೇಲೆ ಎಲ್ಲೂ ಅವರಿಗೆ ಜಾಗ ಕೊಡದೇ ಇರುವುದು ಸರಿಯಲ್ಲ ಇದಕ್ಕೆಲ್ಲಾ ಸರಿಯಾದ ಕ್ರಮವನ್ನು ನೀವು ತೆಗೆದುಕೊಳ್ಳಬೇಕು.

ಶ್ರೀ ಎಂ. ಎಸ್. ಕೃಷ್ಣನ್,—ಆಶ್ವಾಸನೆ ಈಡೇರಿಲ್ಲ ಎಂಬ ಮಾತಂ ಹೇಳಿರುವುದು ಸರಿಯಲ್ಲ. ಅಂತಹವರಿಗೆ, ನಮ್ಮ ಕ್ಷೇತ್ರದಲ್ಲಿ ಬೇರೆ ಕಡೆ ಸೈಟುಗಳನ್ನು ಕೊಟ್ಟಿರುವುದು ನಮ್ಮ ಗಮನಕ್ಕೆ ಬಂದಿದೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಿಮಂಗೆಲ್ಲೋ ಆಗಿರಬಹುದಂ, ನಿಮ್ಮ ಅನುಭವ ಅದು.

ಸಭಾಧ್ಯಕ್ಷರು.—ಶಾಸನಸಭೆಯಲ್ಲಿ ಕೊಟ್ಟು ಮಾತು ನಡೆಯಲಿಲ್ಲ ಎಂದರೆ ನಿಮಗೆ ಬೇರೆ ಮಾರ್ಗ ಏನಿದೆ ?

ಶ್ರೀ ಜೆ. ನಾರಾಯಣಸ್ವಾಮಿ.—ಬರೀ ನಿವೇಶನ ಕೊಡುವುದಿಲ್ಲ, ಅಂತಹವರಿಗೆ ಮನೆಗಳನ್ನು ಕಟ್ಟಿಸಿಕೊಡಬೇಕು. ೪೦–೫೦ ಸಾವಿರರೂಪಾಯಿಗಳ ಸಾಲಸೋಲ ಮಾಡಿ ಆ ಹಣಕ್ಕೆ ಬಡ್ಡಿ ಕೊಡುತ್ತಿದ್ದಾರೆ. ಎಲ್ಲೆಲ್ಲೂ ತೆಗೆದುಕೊಂಡುಬಂದು, ಯಾರಿಂದಲೋ ತೆಗೆದುಕೊಂಡು ಬಂದು. ಮನೆ ಕಟ್ಟಿರುವವರು ನೇಣು ಹಾಕಿಕೊಳ್ಳಬೇಕಾದ ಪರಿಸ್ಥಿತಿ ಆಗಿದೆ.

ಶ್ರೀ ಬಿ. ಎಸ್. ಯಡಿಯೂರಪ್ಪ —ಬೆಳಿಗ್ಗೆ ನಾಲ್ಕು ಗಂಟೆಗೆ ಪೋಲೀಸರು ಮನೆ ನುಗ್ಗಿದ್ದಾರೆ; ಪೊಲೀಸ್ ಇಲಾಖೆಗೆ ಇದು ಹ್ಯಾಯವೇ, ತಾವೇ ಹೇಳಿ ? ಇವತ್ತು ಅವರ ಮನೆ ನುಗ್ಗಿತ್ತಾರೆ. ನಾಳೆ ನಮ್ಮ ಮನೆ ನುಗ್ಗುತ್ತಾರೆ. ಒಬ್ಬ ಮಹಿಳೆಗೆ ಬೂಟ್ ಕಾಲಿನಲ್ಲಿ ಒದ್ದಿದ್ದಾರೆ. ಇದು ಜನತಾ ಸರಕಾರವೇ, ಹೆಣ್ಣು ಮಕ್ಕಳಿಗೆ ಎಂದರೆ ಎಲ್ಲರಿಗೂ ಒಂದೇ. ಅಧ್ಯಕ್ಷರೇ ಇದನ್ನು ದಯವಿಟ್ಟು ನೇರವಾಗಿ ಪರಿಶೀಲನೆ ಮಾಡಬೇಕು.

ಸಭಾಧ್ಯಕ್ಷರು.—ನೀವು ಈ ರೀತಿ ಎದ್ದು ನಿಂತುಕೊಂಡು ಮಾತನಾಡಿದರೆ ನಾನು ಏನು ಮಾಡಲಿ ?

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸಭಾಧ್ಯಕ್ಷರೇ, ಈಗ ಮಾನ್ಯ ಸಚಿವರೂ ಕೂಡಾ ಮನೆಗಳನ್ನು ಒಡೆಯುವುದಿಲ್ಲ ಎಂಬ ಮಾತನ್ನು ಹೇಳಿದ್ದಾರೆ. ಮಾನ್ಯ ಕೃಷ್ಣಪ್ಪನ್ ಅವರ ಅಭಿಪ್ರಾಯದಲ್ಲಿ, ಅತೀ ಅಪಶ್ಯಕವಾಗಿ ಎಲ್ಲಿ ರೋಡ್ ಬರಬೇಕು, ಅಂತಹ ಕಡೆಗಳಲ್ಲಿ ಮನೆಗಳನ್ನು ಒಡೆಯತಕ್ಕ ಪ್ರಶ್ನೆ ಬರಬಹುದು. ನಾವೂ ಕೂಡಾ ಅದೇ ಅಭಿಪ್ರಾಯ ಕೊಟ್ಟಿದ್ದೇವೆ. ಈಗ ಪ್ರಶ್ನೆ ಇಷ್ಟು, ಬಿಲ್ಡಿಂಗ್ ಒಡೆಯುವುದಿಲ್ಲ ಎಂದ ಮೇಲೆ ಅಲ್ಲಿರುವಂಥ ಪೊಲೀಸ್ ಪೋರ್ಸನ್ನು ಹಿಂದೆ ತೆಗೆದುಕೊಳ್ಳಬೇಕು. ಇವರು ಬಿಲ್ಡಿಂಗ್ ಒಡೆಸುವುದಕ್ಕೆ ಹೋದಾಗ ಗಲಾಟೆ ಆಗಿದೆ. ಬಿಲ್ಡಿಂಗ್ ಒಡೆಸುವುದಿಲ್ಲ ಎಂದು ಹೇಳಿದಮೇಲೆ ಅಲ್ಲಿ ಪೊಲೀಸ್ ಪೋರ್ಸ್ ಏಕಿರಬೇಕು ?

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಬಂಗಾರಪ್ಪನವರು ಹೇಳಿದ ವಿಚಾರ ಸತ್ಯಕ್ಕೆ ದೂರವಾದುದು ಅಲ್ಲಿ ಬಿಲ್ಡಿಂಗ್ ಒಡೆಯುವ ಪ್ರಶ್ನೆಯೇ ಇರಲಿಲ್ಲ. ಬಿ.ಡಿ.ಎ. ಯೋಜನೆ ಪ್ರಕಾರ ಡಿಸ್‌ಕಸ್ ಮಾಡಿದ್ದು, ಎಲ್ಲಿ ರಸ್ತೆಗಳು ಬರುತ್ತವೆ, ಅಲ್ಲಿ ಬಿಲ್ಡಿಂಗ್ ತೆಗೆಯಬೇಕೆಂಬ ಯೋಜನೆ ಇರಲಿಲ್ಲ.

ಶ್ರೀ ಎಸ್. ಬಂಗಾರಪ್ಪ —ಅಲ್ಲಿ ಬಿಲ್ಡಿಂಗ್ ಒಡೆಯುತ್ತೇವೆಂದೇ ಪೊಲೀಸರನ್ನು ಇಟ್ಟಿದ್ದೀರಿ. ಬಿಲ್ಡಿಂಗ್ ಒಡೆಯದಿದ್ದ ಮೇಲೆ ಪೊಲೀಸರು ಏತಕ್ಕೆ ಹೋಗಿದ್ದಾರೆ ?

ಶ್ರೀ ಎಂ. ಚಂದ್ರಶೇಖರ್.—ಯೂನಿಯನ್ ಸೆಕ್ರೆಟರಿಯವರು ಸೇರಿಕೊಂಡು ಹೋಗಿ ಬಿಡಿಎ ಕೆಲಸಗಾರರರ ಮೇಲೆ ಧಾಳಿ ಮಾಡಿದ್ದಾರೆ. ಅಲ್ಲಿ ಕೆಲಸ ಮಾಡತಕ್ಕ ಹೆಣ್ಣುಮಕ್ಕಳು, ಹಾಗೂ ಅಧಿಕಾರಿಗಳ ಮೇಲೆ ಧಾಳಿ ಮಾಡಿದ್ದಾರೆ. ಅದಕ್ಕೆ ಪೊಲೀಸರನ್ನು ಇಟ್ಟಿದ್ದೀವಿ.

ಶ್ರೀ ಎಸ್. ಬಂಗಾರಪ್ಪ.—ಬಿ. ಡಿ. ಎ. ಕೆಲಸಗಾರರು ಅಲ್ಲಿಗೆ ಹೋದಾಗ, ಬಿಲ್ಡಿಂಗ್ ಒಡೆಯುತ್ತಾರೆಂಬ ಭಾವನೆಯಿಂದ ಜನ ಸೇರಿ ವಿರೋಧ ಮಾಡಿದಾಗ, ಪೊಲೀಸರನ್ನು ರಕ್ಷಣೆಗೆ ಕರೆಯಿಸಿಕೊಂಡಿದ್ದಾರೆ ಇದಕ್ಕೆ ನಾನು ಒಂದು ಸಲಹೆ ಮಾಡುತ್ತಿದ್ದೇನೆ. ದಯವಿಟ್ಟು ವಿಚಾರ ಮಾಡಿ. ಇಲ್ಲಿ ಬೆಂಗಳೂರಿಂದ ಬೆಂಗಳೂರು ನಗರದ ಶಾಸಕರೂ ಇದ್ದಾರೆ, ವಿಕ್ಷದವರೂ ಇದ್ದಾರೆ, ಸದನದ ಬೇರೆ ಕೆಲವರು ಸದಸ್ಯರೂ ಇದ್ದಾರೆ. ಸದನದ ಸಮಿತಿ ಮಾಡಿ. ಇದು ಬರೀ ಬಿ.ಡಿ.ಎ. ಪ್ರಶ್ನೆ ಅಲ್ಲ ಬೇರೆ ಪ್ರಶ್ನೆಯೂ ಇದರಲ್ಲಿ ಇದೆ. ಎಲ್ಲಿ ಅವಶ್ಯವಾಗಿ ರೋಡ್ ಮಾಡಬೇಕು, ಎಲ್ಲಿ ಲೇಔಟ್ ಮಾಡಬೇಕು, ಅದನ್ನು ನಾನೂ ಒಪ್ಪುತ್ತೇನೆ.

MR. SPEAKER.—What is the purpose of the BDA ?

ಶ್ರೀ ಎಸ್. ಬಂಗಾರಪ್ಪ.—ಇಂತಹ ಕಡೆ ರೋಡ್ ಬರಬೇಕೆಂದು ಬಿ. ಡಿ. ಎ. ಅವರು ಒಂದು ನಕ್ಷೆ ಹಾಕಿಕೊಂಡು ಬಿಟ್ಟಿದ್ದಾರೆ. ಆ ಪ್ರಕಾರ ಅಲ್ಲಿ ಕೆಲಸ ನಡೆಯುತ್ತಿದೆ. ಶಾಸಕರ ಸಮಿತಿಯೊಂದನ್ನು ಏನು ಮಾಡಿಬಿಟ್ಟರೆ ಒಳ್ಳೆಯದು ಎಂದು ನಾನು ಸಲಹೆ ಮಾಡುತ್ತೇನೆ. ನೀವೂ ಹೋಗಿ ಬಿ.ಡಿ.ಎ. ಅವರನ್ನೂ ಇಟ್ಟುಕೊಳ್ಳಿ. ಇಲ್ಲಿಯ ಶಾಸಕರೂ ಇರಲಿ. ಎಲ್ಲಾ ಹೋಗಿಎಲ್ಲಿ ಅತೀ ಅವಶ್ಯಕವಾಗಿ ರೋಡ್ ಬೇಕು ಎನ್ನುವುದಾದರೆ, ನೋಜೋಣ ಪೋಲೀಸ್ ಫೋರ್ಸನ್ನು ವಿಥ್‌ಡ್ರಾ ಮಾಡದೇ ಇದ್ದರೆ, ಈ

ಸದನದಲ್ಲಿಈ ಸದನದಲ್ಲಿ ಈ ಮ್ಯಾಟರ್ ರೈಸ್ ಮಾಡುವುದನ್ನು ನಿಲ್ಲಿಸುವುದಕ್ಕೆ ಆಗುವುದಿಲ್ಲ. ಭಯದಲ್ಲಿ ಜನಜೀವನ ಮಾಡುವುದಕ್ಕೆ ಆಗುತ್ತದೆಯೇ ?

ಶ್ರೀ ಎಂ. ಚಂದ್ರಶೇಖರ್.—ಕೆಲಸ ಮಾಡುವವರಿಗೆ ರಕ್ಷಣೆ ಕೊಡುವುದಕ್ಕೆ ಪೊಲೀಸರು ಅಲ್ಲಿದ್ದಾರೆ ಕೆಲಸ ಮಾಡುವವರ ಮೇಲೆ ಧಾಳಿ ಆಗದಿದ್ದರೆ ಪೊಲೀಸರು ಹೋಗುತ್ತಿರಲಿಲ್ಲ. ಪೊಲೀಸರು ಆ ಆರ್ಡರ್ ಆರ್ಡರ್ ಸರಿಯಾಗಿ ಇದೆ ಎಂದು ಕಂಡು ಬಂದ ತಕ್ಷಣ ಫೋರ್ಸನ್ನು ಅಲ್ಲಿಂದ ತೆಗೆಯುತ್ತಾರೆ.

ಶ್ರೀ ಎಸ್. ಬಂಗಾರಪ್ಪ.—ಅಲ್ಲಿವರೆಗೆ ಹೆದರಿಕೆಯಿಂದ ಜನ ಜೀವನ ಮಾಡಬೇಕೆ ? ಆ ಮಹಿಳೆ ಲೀಡರ್‌ಶಿಪ್ ವಹಿಸಿಕೊಳ್ಳುತ್ತಾರೆಂದು ಹಿಂಸೆ ಕೊಡುವುದಕ್ಕೆ ಪೊಲೀಸರು ಅಲ್ಲಿಗೆ ಹೋಗಿದ್ದಾರೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ತಾವು ಅಲ್ಲಿಗೆ ಹೋಗಿಬರಬೇಕು. ರಾತ್ರಿ ೧೨ ಗಂಟೆಗೆ ಪೊಲೀಸ್ ಬಂದೋಬಸ್ತ್ ಮಾಡಿ ಇಟ್ಟುಕೊಂಡು, ಆ ಯೂನಿಯನ್ ಸೆಕ್ರೆಟರಿಯನ್ನು ಅರೆಸ್ಟ್ ಮಾಡಿ ಕೋರ್ಟಿಗೆ ಕರೆದುಕೊಂಡು ಹೋಗೋತಕ್ಕಂಥ ಅವಶ್ಯಕತೆ ಏನಿತ್ತು ಅಲ್ಲಿ ?

ಸಭಾಧ್ಯಕ್ಷರು.—ಅಲ್ಲಿ ಶಾಸನಬಾಹಿರವಾಗಿ ನಡೆದಿದೆ ಎಂದು ಇಲ್ಲಿಯೂ ಸದನದಲ್ಲೂ ಶಾಸನ ಬಾಹಿರವಾಗಿ ನಡೆದುಕೊಳ್ಳಬೇಕೇ ?

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಂತ್ರಿಗಳು ಸ್ಥಳಕ್ಕೆ ಹೋಗಬೇಕು. ಅದನ್ನು ಒಪ್ಪಿಕೊಳ್ಳುವುದಕ್ಕೆ ಅವರು ರೆಡಿ ಇಲ್ಲ. ಹೀಗಾದರೆ ಬಡವರ ಗತಿ ಏನು ?

ಶ್ರೀ ಎಸ್. ಬಂಗಾರಪ್ಪ.—ಜನಗಳಲ್ಲಿ ಈಗಿರತಕ್ಕಂಥ ನಂಬಿಕೆ ಇಲ್ಲ. ನಾಳೆ ಪರಿಸ್ಥಿತಿ ವಿಕೋಪಕ್ಕೆ ಹೋಗತಕ್ಕಂಥ ಪರಿಸ್ಥಿತಿ ಇದೆ. ಸಮಿತಿಯ ಬಗ್ಗೆ ತಾವು ಏನು ಹೇಳುತ್ತೀರಿ? ಸಮಿತಿಗೆ ಹೋಗಿ ನೋಡಿಕೊಂಡು ಬರುವ ಜವಾಬ್ದಾರಿ ಕೊಡಿ. ಎರಡು ಮೂರು ಗಂಟೆಯಲ್ಲಿ ಆ ಕೆಲಸವನ್ನು ಮುಗಿಸಬಹುದು.

MR. SPEEKAR.—At least let the Minister go and visit the spot today.

ಶ್ರೀ ಎಂ. ಚಂದ್ರಶೇಖರ್.—ಮಾನ್ಯ ಅಧ್ಯಕ್ಷರೇ, ನಾನು ಮೊದಲೇ ಹೋಗಿದ್ದು, ಅದನ್ನೆಲ್ಲಾ ನೋಡಿ ಪರಿಶೀಲನೆ ಮಾಡಿಕೊಂಡು ಬಂದಿದ್ದೇನೆ. ಎಂಜಿನಿಯರ್‌ಗಳು ನಾವು ಎಲ್ಲಾ ಹೋಗಿದ್ದೆವು. ಹೋಗಿ ನಿರ್ದೇಶನ ಕೊಟ್ಟಮೇಲೆ ಯಾವುದೇ ಕ್ರಮದಿಂದಾಗಲೀ ಕಟ್ಟಡಗಳನ್ನು ಕ್ಲಿಯರ್ ಮಾಡುವುದಕ್ಕೆ ಆಸ್ಪದ ಇಲ್ಲ. ರಸ್ತೆಗೆ ಮಧ್ಯೆ ಮನೆ ಬಂದರೆ, ಏನಾದರೂ ಸಹ ಕಟ್ಟಡವನ್ನು ಕೆಡವುದಕ್ಕೆ ಹೋಗಬಾರದು. ವೈಜ್ಞಾನಿಕ ಪರಿಹಾರ ಯೋಜನೆ ಮಾಡೋಣ, ಕಟ್ಟಡಗಳನ್ನು ಆಲ್ಲಿಗೇ ಬಿಟ್ಟುಕೊಂಡು ರಸ್ತೆಗಳನ್ನು ಮಾಡಿ ಎಂದು ಹೇಳಿದ್ದೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಂತ್ರಿಗಳ ಮಾತು ಸರಿಯಲ್ಲ ಮಧ್ಯದಲ್ಲಿ ಮನೆ ಬಿಟ್ಟುಕೊಂಡು, ಆಕಡೆ ರೋಡ್, ಈ ಕಡೆ ರೋಡ್ ಮಾಡಿದರೆ ಅವರು ಏನು ಮಾಡುವುದಕ್ಕೆ ಸಾಧ್ಯ ?

ಶ್ರೀ ಎಂ. ಚಂದ್ರಶೇಖರ್.—ಬೆಂಗಳೂರು ನಗರ ಬೆಳೆದಿರುವುದನ್ನು ನಾವು ನೋಡಿದ್ದೇವೆ. ಮಾನ್ಯ ಸದಸ್ಯರು ಹೇಳುವ ರೀತಿಯಲ್ಲಿ ಹೋದರೆ ಬಿ.ಡಿ.ಎ. ರದ್ದು ಮಾಡಬೇಕಾಗುತ್ತದೆ. ನಗರವನ್ನು ಕ್ರಮವಾಗಿ ಬೆಳೆಸುವ ದೃಷ್ಟಿಯಿಂದ ನಾವು ಈ ಕ್ರಮವನ್ನು ತೆಗೆದುಕೊಂಡಿದ್ದೇವೆ.

ಶ್ರೀ ಎಸ್. ಬಂಗಾರಪ್ಪ.—ಸದನದ ಸಮಿತಿ ಮಾಡಿ. ಅವರು ಹೋಗಿ ನೋಡಿಕೊಂಡು ಬಂದರೆ, ತಾವೂ ಒಂದು ೫ ನಿಮಿಷ ಹೋಗಿ ಬಂದರೆ, ಇಲ್ಲಿ ಯಾರೂ ಮಾತನಾಡುವ ಅವಶ್ಯಕತೆ ಇಲ್ಲ. ವಿವಾದ ಅದು ಮನದಟ್ಟಾಗುತ್ತದೆ. ಇಲ್ಲಿ ಚರ್ಚೆ ಮುಂದುವರೆಸುವ ಅವಶ್ಯಕತೆ ಇಲ್ಲ. ಚರ್ಚೆಗೆ ಅವಕಾಶ ಮಾಡಿಕೊಡತಕ್ಕಂಥ ಅನೇಕ ವಿವರಗಳು ನಮ್ಮ ಹತ್ತಿರ ಇವೆ. ಸಚಿವರು ಹೇಳುವುದಕ್ಕೂ, ನಮಗೂ ವ್ಯತ್ಯಾಸ ಬರುತ್ತಿದೆ. ಎಲ್ಲಾ ವಿವರಗಳನ್ನು ತಿಳಿದು ತಾವು ಯಾವರೀತಿ ಇಂಡಿಕೇಟ್ ಮಾಡುತ್ತೀರೋ, ಮಾಡಿ, ನಮ್ಮದೇನೂ ಅಭ್ಯಂತರ ಇಲ್ಲ.

ಸಭಾಧ್ಯಕ್ಷರು.—ಡಿವ್ಯಾಂಡ್‌ನಲ್ಲಿ ಬರುತ್ತದೆ.

ಶ್ರೀ ಎಸ್. ಬಂಗಾರಪ್ಪ.—ಡಿಮ್ಯಾಂಡ್‌ನಲ್ಲಿ ವಿವರವಾಗಿ ಉತ್ತರ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಎಲ್ಲಾ ಜನರದ್ದೂ ಸೇರಿಸಿದರೆ, ಕೋಟಿಗಟ್ಟಲೆ ಹಣ ಅಲ್ಲಿ ಇನ್‌ವೆಸ್ಟ್ ಆಗಿದೆ. ಕೆಲವರು ಬ್ಯಾಂಕ್‌ನಿಂದ ಸಾಲ ತೆಗೆದುಕೊಂಡಿದ್ದಾರೆ. ಇವೆಲ್ಲಾ ಪ್ರಶ್ನೆ ಇರುವುದರಿಂದ ಇದನ್ನು ಡಿಮ್ಯಾಂಡ್‌ವಲ್ಲಿ

ತಗೆಮಕೊಳ್ಳುವುದಕ್ಕೆ ಆಗುವುದಿಲ್ಲ. ಸೆಪರೇಟಾಗಿ ಇದರ ಬಗ್ಗೆ ತಾವು ಚರ್ಚೆಗೆ ಅವಕಾಶ ಕೊಡದಿದ್ದರೆ ಅಥವಾ ತಾವು ಹೇಗೆ ಬೇಕೋ ಹಾಗೆ ಮಾಡಿ. ಇದು ತಮಗೆ ಬಿಟ್ಟದ್ದು.

Discussion and Voting on Demands for Grants

Demand Nos.—1) Soil & water conservation and Agriculture (excluding Horticulture & DPAP)

ಶ್ರೀ ಬಿ. ಎಲ್. ಗೌಡ.—ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೫ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಭೂಸಾರ ಮತ್ತು ಜಲರಕ್ಷಣೆ ವ್ಯವಸಾಯಕ್ಕೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಪಹಿಸಲು ಸರಕಾರಕ್ಕೆ ರಾಜಸ್ವ ಖಾತೆಯಲ್ಲಿ ೪೬,೮೪,೭೬,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧೫,೨೬,೯೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿಕೊಳ್ಳುತ್ತೇನೆ.

Demand No.—47) Land Revenue etc.
48) Stamps Registration
49) Relief on Account of Natural Calamities
50) Rehabilitation Schemes
51) Religions and Charitable Iustitutions etc.

ಶ್ರೀ ವಿ. ಎಲ್. ಪಾಟೀಲ್,—(ಕಂದಾಯ ಮಂತ್ರಿಯಾಂವರು) —ಮಾನ್ಯ ಅಧ್ಯಕ್ಷರೇ ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧-೩-೧೯೮೫ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಭೂಕಂದಾಯ ಇತ್ಯಾದಿಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಪಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೨೧,೧೫,೧೫,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨೭,೧೫,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡಬೇಕೆಂದು ನಾನು ಬಿನ್ನವಿಸಿ ಕೊಳ್ಳುತ್ತೇನೆ,

ಬೇಡಿಕೆಗಳನ್ನು ಸಭೆಯ ಮುಂದೆ ಮಂಡಿಸಲಾಯಿತು

ಅಧ್ಯಕ್ಷರು.—ಈಗ ಚರ್ಚೆಗಾಗಿ ಬೇಡಿಕೆಗಳನ್ನು ಸಭೆಯ ಮುಂದೆ ಮಂಡಿಸಲಾಗಿದೆ. ಸಂಪಾರು ೨೩ ಜನ ಹೆಸರು ಕೊಟ್ಟಿದ್ದಾರೆ. ಯಾವ ರೀತಿ ವಾಂಗಿಸಬಹುದೆಂಬುದನ್ನು ಈ ಮಾನ್ಯ ಸಭೆಗೆ ಬಿಡುತ್ತೇನೆ,

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಅಧ್ಯಕ್ಷರೇ, ೨೩ ಜನ ಹೆಸರು ಕೊಟ್ಟಿರುವುದು ನನಗೆ ಗೊತ್ತಿಲ್ಲ.

ಅಧ್ಯಕ್ಷರು.—ನನಗೆ ಗೊತ್ತಿದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ತಾವು ಎಚ್ಚರಿಕೆ ಕೊಟ್ಟಿದ್ದಕ್ಕೆ ವಂದನೆಗಳು.

(ಪ ರಾಂದೇವ್ ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇವತ್ತು ವ್ಯವಸಾಯ ಮತ್ತು ಕಂದಾಯ ಇಲಾಖೆಗಳ ಬೇಡಿಕೆಗಳನ್ನು ಸಂಬಂಧಪಟ್ಟ ಸಚಿವರುಗಳು ಈ ಸಭೆಯ ವಾಂದಿಟ್ಟಿದ್ದಾರೆ. ಇವೆರಡೂ ದೊಡ್ಡ ಬೇಡಿಕೆಗಳಷ್ಟೇ ಅಲ್ಲ, ರಾಜ್ಯದ ಎಲ್ಲಾ ಜನಗಳಿಗೂ ವ್ಯಾಪಕವಾಗಿ ಅವಶ್ಯಕವಾಗಿ ಬೇಕಾಗಿರತಕ್ಕಂಥ ಬೇಡಿಕೆಗಳು. ಇವುಗಳ ಮೇಲೆ ಮಾತನಾಡುವುದಕ್ಕೆ ಕಾಲಾವಕಾಶ ಹೆಚ್ಚು ಸಿಕ್ಕಿದ್ದರೆ ಒಳ್ಳೆಯದಿತ್ತು. ಎರಡು ಗಂಟೆಗೆ ಪ್ರಾರಂಭವಾಗಿದೆ ; ೬ ಗಂಟೆಗೆ ಮುಗಿಸಬೇಕು, ೯ ಗಂಟೆಯಾಗುತ್ತದೆಯೋ ಏನೋ ಗೊತ್ತಿಲ್ಲ. ಈ ಬೇಡಿಕೆಗಳ ಮೇಲೆ ಕೆಲವಾರು ವಿಷಯಗಳನ್ನು ಸಭೆಯ ವಾಂದಿಡುವುದಕ್ಕೆ ಇಚ್ಛೆಪಡುತ್ತೇನೆ. ಈ ಬೇಡಿಕೆಗಳ ಪ್ರಾಮುಖ್ಯತೆ ಬಗ್ಗೆ ಪ್ರತ್ಯೇಕವಾಗಿ ಹೇಳಬೇಕಾದ ಅವಶ್ಯಕತೆ ಏನೂ ಇಲ್ಲ. ಹಳ್ಳಿಗಾಡಿನಲ್ಲಿ ಯಾರು ಯಾರು ವ್ಯವಸಾಯವನ್ನು ಅವಲಂಬಿಸಿದ್ದಾರೋ, ಎಲ್ಲರಿಗೂ ಇದು ಅನ್ವಯವಾಗುತ್ತದೆ. ರೆವಿನ್ಯೂ ಖಾತೆ ಮತ್ತು ವ್ಯವಸಾಯ ಖಾತೆ ರೈತರ ಜೀವನದಲ್ಲಿ ಹಾಸುಹೊಕ್ಕಾಗಿ ಹೊಂದಿಕೊಂಡಿವೆ. ಭೂಮಿಯನ್ನು ನಂಬಿರತಕ್ಕಂಥ ರೈತನಿಗೆ ಭೂಮಿ ಮಾತ್ರವಲ್ಲ ; ಭೂಮಿಗೆ ಸಂಬಂಧಪಟ್ಟ ಅನೇಕ